ಇ) ಸರ್ವೆ ಕಾರ್ಯ ಪೂರ್ಣವಾದ ನಂತರ ವಿವರಗಳು ಲಭ್ಯವಾಗುವುದು.

571 ಶ್ರೀ ರುದ್ರೇಶ್‌ಗೌಡ.ವೈ.ಎನ್. : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ಯಗಚಿ ಯೋಜನೆ ಜಾರಿಗೆ ತರಲಾಗಿದೆಯೆ?

ಆ) ಹಾಗಿದ್ದಲ್ಲಿ, ಯಗಚಿ ಯೋಜನೆಯ ಎಡದಂಡೆ ನಾಲೆಯು ಬೇಲೂರು ತಾಲ್ಲೂಕಿನ ಹೀರಗುಪ್ಪೆ ಗ್ರಾಮದ ಪಕ್ಕದಲ್ಲಿ ಹಾದು ಹೋಗಿರುವುದರಿಂದ, ನಾಲೆಯಲ್ಲಿ ನೀರು ಹರಿಯುವಾಗ ಹೀರಗುಪ್ಪೆ ಗ್ರಾಮದ ಮನೆಗಳು, ದೇವಸ್ಥಾನ ಹಾಗೂ ಇತರೆ ಕಟ್ಟಡಗಳು ಶೀತಪೀಡಿವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಗ್ರಾಮವನ್ನು ಸ್ಥಳಾಂತರಿಸಿ, ಪುನರ್ ವಸತಿಯನ್ನು ಕಲ್ಪಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಬೇಲೂರು ತಾಲ್ಲೂಕಿನಲ್ಲಿ ಯಗಚಿ ಯೋಜನೆ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂಖ್ಯೆ: PWD 91 NHP 83, ದಿನಾಂಕ: 27-06-1984, ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಯೋಜನೆಯನ್ನು ಜಾರಿಗೆ ತರಲಾಗಿದೆ.

ಆ) ಹೀರಗುಪ್ಪೆ ಗ್ರಾಮವು ಯಗಚಿ ಎಡದಂಡೆ ನಾಲೆಯ 22ನೇ ಕಿ.ಮೀ ನಿಂದ ಸುಮಾರು 300 ಮೀ. ದೂರದಲ್ಲಿದ್ದು, ನಾಲಾ ತಳಮಟ್ಟದ ಆರ್.ಎಲ್ 947.400 ಮೀ. ಇದ್ದು, ಹೀರಗುಪ್ಪೆ ಗ್ರಾಮವು ಸರಸರಿ 950.560 ಮೀ. ಎತ್ತರದಲ್ಲಿರುತ್ತದೆ. ಶೀತಪೀಡಿತವಾಗುವುದನ್ನು ತಾತ್ಕಾಲಿಕವಾಗಿ ತಡೆಗಟ್ಟಲು ಈಗಾಗಲೇ ಊರಿನ ಸುತ್ತ ಸಿಪೇಜ್ ಡ್ರೈನ್ ಮಾಡಲಾಗಿದೆ.

ಇ) ಹೇಮಾವತಿ ಮತ್ತು ಯಗಚಿ ಯೋಜನೆಗಳ ಅಡಿಯಲ್ಲಿ ಶೀತಪೀಡಿತವಾಗಿರುವ ಗ್ರಾಮಗಳನ್ನು ಗುರುತಿಸಿ ಸ್ಥಳಾಂತರಿಸಲು ಶಿಫಾರಸ್ಸು ಮಾಡಲು ಸರ್ಕಾರದ ಆದೇಶ ಸಂಖ್ಯೆ:ಕಂಇ 215 ಆರ್‌ಇಹೆಚ್ 2008, ದಿನಾಂಕ: 11-12-2008, ರಂತೆ ಪ್ರಾದೇಶಿಕ ಆಯುಕ್ತರು, ಮೈಸೂರು, ಇವರ

ಅಧ್ಯಕ್ಷತೆಯಲ್ಲಿ ರಚಿತವಾದ ಉನ್ನತಮಟ್ಟದ ಸಮಿತಿಯ ಮುಂದೆ ಮಂಡಿಸಿ, ಸಮಿತಿಯ ಶಿಫಾರಸ್ಸಿನ ನಂತರ ಕ್ರಮ ಕೈಗೊಳ್ಳಲಾಗುವುದು.

302 ಶ್ರೀ ಕುಮಾರಸ್ವಾಮಿ ಕೆ.ಜಿ. : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ತುಂಗಾ ಏತ ನೀರಾವರಿ ಯೋಜನೆಯನ್ನು ಎಂದು ಪ್ರಾರಂಭ ಮಾಡಲಾಗುವುದು;

ಆ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ;

ಇ) ಸದರಿ ಯೋಜನೆಯನ್ನು ಆರಂಭಿಸಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ತುಂಗಾ ಏತ ನೀರಾವರಿ ಯೋಜನೆಯ ಇತ್ತೀಚಿನ ಪರಿಷ್ಕೃತ ಅಂದಾಜು ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯ 101ನೇ ಸಭೆಯಲ್ಲಿ ಚರ್ಚಿತವಾಗಿದ್ದು, ಉಪ ಸಮಿತಿಯು ತೆಗೆದುಕೊಂಡಿರುವ ಆಕ್ಷೇಪಣೆಗಳಿಗೆ ಅನುಸರಣೆಯನ್ನು ಸಲ್ಲಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಇದಾದ ನಂತರದಲ್ಲಿ, ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ತರುವಾಯ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು.

ಆ) ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಕರ್ನಾಟಕ ನೀರಾವರಿ ನಿಗಮದಿಂದ ಸೂಕ್ತ ಅನುದಾನವನ್ನು ಹಂಚಿಕೆ ಮಾಡಲಾಗುವುದು.

ಇ) ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿಕೊಂಡು, ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗುವುದು.

311 ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಗೆ ಸಿಂಗಟಾಲೂರು ಏತ ನೀರಾವರಿಯ ಬಚಾವತ್ ಯೋಜನೆಯಡಿ ಎ ಮತ್ತು ಬಿ ಸ್ಕೀಂನಲ್ಲಿ ಎಷ್ಟು ಟಿಎಂಸಿ. ನೀರನ್ನು ಕಾಯ್ದಿರಿಸಲಾಗಿದೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು);